ಗುಲ್ಬರ್ಗ ಜಿಲ್ಲೆಯಲ್ಲಿ ನೀರಾವರಿ ಕೆರೆಗಳ ಹೂಳು ತೆಗೆಯುವುದು.

2528 - ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿರುವ ಸಣ್ಣ ನೀರಾವರಿ ಕೆರೆಗಳೆಷ್ಟು (ತಾಲ್ಲೂಕುವಾರು ವಿವರಗಳನ್ನು ನೀಡುವುದು).

ಆ) ಈ ಸಣ್ಣ ನೀರಾವರಿ ಕೆರೆಗಳಕಾಮಗಾರಿಯನ್ನೇನಾದರೂ ತೆಗೆದುಕೊಂಡಿದೆಯೇ. ತೆಗೆದುಕೊಂಡಿದ್ದಲ್ಲಿ ಕಾಮಗಾರಿವಾರು ವಿವರಗಳನ್ನು ನೀಡುವುದು.

ಇ) ಈ ಕಾಮಗಾರಿಗೆ ಇದುವರೆವಿಗೂ ಬಿಡುಗಡೆ ಮಾಡಿರುವ ಹಣವೆಷ್ಟು ಖರ್ಚು ಮಾಡಿರುವ ಹಣವೆಷ್ಟು (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು).

ಈ) ನಬಾರ್ಡ್ ಯೋಜನೆಯಿಂದ ಸಣ್ಣ ನೀರಾವರಿ ಕೆರೆಗಳ ಹೂಳನ್ನು ತೆಗೆಸುವ ಯೋಜನೆ ಏನಾದರೂ ಇದೆಯೇ ಇದ್ದಲ್ಲಿ ನಬಾರ್ಡ್ ಯೋಜನೆಯಿಂದ ಹೂಳನ್ನು ತೆಗೆಸುವ ಬಗ್ಗೆ ಎಷ್ಟು ಕೆರೆಗಳನ್ನು ಸೂಚಿಸಲಾಗಿದೆ?

(ಗುಲ್ಬರ್ಗಾ ಜಿಲ್ಲೆಯ ತಾಲ್ಲೂಕುವಾರು ವಿವರಗಳನ್ನು ನೀಡುವುದು)?

ಶ್ರೀಮತಿ ಲಿಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) 472

(ವಿವರಗಳನ್ನು ಅನುಬಂಧ -1ರಲ್ಲಿ ಲಗತ್ತಿಸಿದೆ)

ಆ) 46 ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. (ವಿವರಗಳನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ)

ಇ) ಈ ಕಾಮಗಾರಿಗಳಿಗೆ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಒಟ್ಟು ಹಣವನ್ನು ಬಿಡುಗಡೆ ಮಾಡುವುದರಿಂದ ಪ್ರತ್ಯೇಕವಾಗಿ ಕಾಮಗಾರಿಗೆ ಹಣ ಬಿಡುಗಡೆ ಆದ ವಿವರ ಲಭ್ಯವಿರುವುದಿಲ್ಲ.

ಈ ಕಾಮಗಾರಿಗಳಿಗೆ 1995-96ರಲ್ಲಿ 125.623 ಲಕ್ಷ ರೂ. ವೆಚ್ಚ ಮಾಡಲಾಗಿದೆ.

ಈ) ಇಲ್ಲ.

ವಿಧಾನ ಸಭಾ ಸದಸ್ಯರಾದ ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 2528ಕ್ಕೆ ಅನುಬಂಧ-1.

ಗುಲ್ಬರ್ಗಾ ಜಿಲ್ಲೆ ಸಣ್ಣ ನೀರಾವರಿ ಕೆರೆಗಳ ಬಗ್ಗೆ ತಾಲ್ಲೂಕುವಾರು ವಿವರ.

ಕ್ರ.ಸಂ	ತಾಲ್ಲೂಕು	ಕೆರೆಗಳ ಸಂಖ್ಯೆ
(1)	ಗುಲ್ಬರ್ಗಾ	20
(2)	ಅಳಂದ	16
(3)	ಅಫಜಲಪೂರ	04
(4)	ಚಿತ್ತಾಪುರ	17
(5)	ಚಿಂಚೋಳಿ	19
(6)	ಸೇಡಂ	45
(7)	ಜೇವರ್ಗಿ	3

(8)	ಯಾದಗೀರ್	244
(9)	ಶಹಾಪೂರ	68
(10)	ಶೋರಾಪೂರ	36
	ಒಟ್ಟು	472

ಅನುಬಂಧ

ವಿಧಾನ ಸಭಾ ಸದಸ್ಯರಾದ ಶ್ರೀ ಮಲ್ಲಿಕಾರ್ಜುನ ಖರ್ಗೆ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2528ಕ್ಕೆ ಅನುಬಂಧ-2.

ಗುಲ್ಬರ್ಗಾ ಜಿಲ್ಲೆಯ ಸಣ್ಣ ನೀರಾವರಿ ಕೆರೆಗಳ ಬಗ್ಗೆ ತಾಲ್ಲೂಕುವಾರು ಕಾಮಗಾರಿಗಳ ವಿವರ.

ಕ್ರಮ ಸಂಖ್ಯೆ	ತಾಲ್ಲೂಕು	ಕಾಮಗಾರಿಯ ಹೆಸರು	3:95ರ ವರಗಿನ ವೆಚ್ಚ	1995-96ನೇ ಅನುದಾನ	ಸಾಲಿನಲ್ಲಿ ವೆಚ್ಚ
1.	ಗುಲ್ಬರ್ಗಾ	ಬುಯ್ಯಾರ್ ಕೆರೆ	434.159	5.00	6.177
2.		ಹಗರಗುಂಡಿ ಕೆರೆ	67.74	1.10	0.608
3.		ಖಾಜಿ ಕೋಟನೂರುಕೆರೆ	658.702	1.10	27.144
4.		ಕುಂಠಿ ಕೆರೆ	50.722	0.10	0.421
5.		ಕಲ್‌ಮೋಡ್ ಕೆರೆ	286.933	5.00	10.143
					44.495
6.	ಅಫಜಲಪುರ	ಬೈರಮಡಗಿ ಕೆರೆ	56.513	0.10	0.181
7.		ಅಫಜಲಪುರ ಕೆರೆ	89.663	0.10	0.215
					0.396
8.	ಆಳಂದ	ದೋಂಗಾಪುರ ಕೆರೆ	1.325	5.00	0.048
9.		ಡೋಗಿನಾಲಾ ಕೆರೆ	0.828	1.00	0.430
10.		ಮುಡಗುಂಕಿ ಕೆರೆ	19.956	4.00	2.062
11.		ದೊನ್ನೂರು ಕೆರೆ	0.15	4.00	0.343
12.		ನರೊನ ಕೆರೆ	66.318	0.10	0.229
13.		ಒಡೆದುಹೋದ ಮಟಕಿಕೆರೆ ಪುನರ್ ನಿರ್ಮಾಣ	-	5.00	0.006
14.		ಒಡೆದುಹೋದ ಕೆರೂರು ಕೆರೆ ಪುನರ್ ನಿರ್ಮಾಣ	-	5.00 3.153	0.035
15.	ಚಿತ್ತಾಪುರ	ಕರಡಾಲ್ ಕೆರೆ	610.816	4.00	9.947
16.	ಸೇಡಂ	ಅಲಿಪುರ ಕೆರೆ	552.648	5.00	5.837
17.		ನರಾಟ್ಲಪಾಡ್ ಕೆರೆ	0.753	4.00	0.001

18.		ಕಡ್ಲಾಪುರ ಕೆರೆ ಹೂಳೆತ್ತುವುದು ಮತ್ತು ಅಭಿವೃದ್ಧಿ	46.067	0.10	0.668
19.		ಕನ್ನಗಡ್ಡೆ ಕೆರೆ	-	13.00	0.005
					6.561
20.	ಯಾದಗೀರ್	ಆರಿಗೆರೆ, ಅರ್‌ಕೆರೆ, ಮೂರ್‌ಕೆರೆ	-	2.50	0.006
21.		ಬೆಲ್‌ಗೆರಾ ಕೆರೆ ಅಭಿವೃದ್ಧಿ	7.399	1.00	4.514
22.		ನಲ್ಲಿಚೇರು ಕೆರೆ ಹೂಳೆತ್ತುವುದು	7.323	0.10	1.166
23.		ಅಜಲಾಪುರ ಕೆರೆ ಅಭಿವೃದ್ಧಿ	38.033	0.10	0.831
24.		ನಲ್ಲಿಚೇರು ಕೆರೆಯಿಂದ ಅಪ್ಪಾರೆಡ್ಡಿ ಚೇರು ಕೆರೆಗೆ ಫೀಡರ್ ಚಾನಲ್ ಅಭಿವೃದ್ಧಿ ಕುರಿತು	-	1.00	0.004
					6.521
25.	ಬಂಬೋಳಿ	ಕೋಡ್ಲಿಯಲ್ಲಾಪುರ ಕೆರೆ	381.68	5.00	39.400
26.		ಖಾನಾಪುರ ಕೆರೆ	11.78	2.20	6.48
					45.88
27.		ಮೊರಾನ್ ಕೆರೆ ಹೂಳೆತ್ತುವುದು (ಜಿಲ್ಲಾ ಪರಿಷತ್ ಕಾಮಗಾರಿ)	-	5.00	1.83
28.		ಸಾಲಗಾರ್ ಕೆರೆ ಹೂಳೆತ್ತುವುದು (ಜಿಲ್ಲಾ ಪರಿಷತ್ ಕಾಮಗಾರಿ)	-	5.00	4.82
					6.65
29.	ಸೇಡಂ	ಕೋಟಿಪಲ್ಲಿ ಹೊಸಕೆರೆ	3.999	1.42	-
30.		ದೇವಿಕೆರೆ ಅಂದರ್‌ಕಿಯ ಪುನರ್‌ಜೀವನ	0.970	0.63	-
31.		ಕಾದ್ರಾಪಳ್ಳಿಕೆರೆ ಊರುಕೆರೆ ಅಭಿವೃದ್ಧಿ	0.250	1.470	1.216
					1.216
32.	ಶಹಾಪುರ	ದೂರನಪಳ್ಳಿಯ ಜಿಗ್ರಿಕೆರೆ ಪುನರ್‌ಜೀವನ	4.019	2.00	0.233
33.	ಶೋರಾಪುರ	ಬೆರ್ಕೆಮಡ್ಡಿಕೆರೆ ಏರಿ ರಿಪೇರಿ	0.278	1.22	0.02
34.		ಸಿದ್ದನಕೆರೆ ಕಾಲುವೆ ರಿಪೇರಿ	-	1.50	0.069
		ರಾಯನಪಲ್ಲಿ ಗೋಯಾನ ಕೆರೆ ಅಭಿವೃದ್ಧಿ	0.109	0.89	0.019 0.108
35.	ಯಾದಗೀರ್	ಸೌರಾಷ್ಟ್ರಹಳ್ಳಿ ಕೆರೆ ಅಭಿವೃದ್ಧಿ	5.922	3.00	0.463
36.		ಎಂಟಿಪಲ್ಲಿ ಕೆರೆ	0.42	1.50	
37.		(ವೇಸ್‌ವಯರ್ ಅಭಿವೃದ್ಧಿ)			

38.	(ಪಂಚ್‌ವಾರ್ ಕಾಲುವೆ ಅಭಿವೃದ್ಧಿ)	0.952	0.05	-
39.	ತೊರನತಿಪ್ಪ ಗೋಯನ ಕೆರೆ	3.193	1.65	-
40.	ಸಂಗವಾರ್	-	1.84	-
41.	ಹಚ್ಚೊಳ ಊರ ಕೆರೆ	-	3.20	-
42.	ಕನಿಕಾಲ್ ಕಬ್ಬರ್ ಕೆರೆ	-	4.00	-
43.	ಕನಕಾಲ್ ಸೌಧಿ ಕೆರೆ	-	0.15	-
44.	ನದಿಕುಂಟಾ ಚಿನ್ನಸಾಂಬಾರ್	-	2.00	-
45.	ಟಿಟೋ- ಮೆಡಿಕುಂಟಾ ಬಾಲ್‌ಜಿ	-	0.70	-
46.	ಅಮ್ಮಪಳ್ಳಿ ಕೆರೆ	-	1.20	-
				0.463
	ಜಿಲ್ಲಾ ಪಂಚಾಯತ್ ಯಾದಗೀರ್ ವಿಭಾಗದ ವೆಚ್ಚ :			2.020
	ಒಟ್ಟು ಮೊತ್ತ :			125.623

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ನಾನು ಕೇಳಿದಂಥ ಪ್ರಶ್ನೆಗೆ ಅವರೇನೊ ಉತ್ತರವನ್ನು ಕೊಟ್ಟಿದ್ದಾರೆ. ಅನುಬಂಧ (1) ರಲ್ಲಿ ಗುಲ್ಬರ್ಗಾದಲ್ಲಿ ಎಷ್ಟು ಸಣ್ಣ ನೀರಾವರಿ ಕೆರೆಗಳು ಇವೆ ಎಂದು ನಾನು ಕೇಳಿದ್ದಕ್ಕೆ, ತಾವು 472 ಎಂದು ಉತ್ತರವನ್ನು ಕೊಟ್ಟಿದ್ದೀರಿ. ಅದರಲ್ಲಿ ಯಾದ್ಗಿರಿನಲ್ಲಿ ಎಷ್ಟು ಎಂದು ಕೇಳಿದರೆ, 244 ಎಂದು ಹೇಳಿದ್ದೀರಿ. 244 ಸಣ್ಣ ನೀರಾವರಿ ಕೆರೆಗಳು ಇರುವುದಕ್ಕೆ ಸಾಧ್ಯವಿಲ್ಲ. ಅದರಲ್ಲಿ ಜಿಲ್ಲಾಪರಿಷತ್‌ನ ಕೆಲವು ಕೆರೆಗಳು ಇರಬಹುದು, ಕೆಲವು ನಿಮ್ಮದೂ ಇರಬಹುದು. ಏತಕ್ಕೆಂದರೆ, ಬೇರೆ ಅಂಕಿಅಂಶಗಳನ್ನು ನೀವು ಕೊಟ್ಟಿದ್ದೀರಿ. ಗುಲ್ಬರ್ಗಾದಲ್ಲಿ 20, ಆಳಂದದಲ್ಲಿ 16, ಅಜ್ಜಲ್‌ಪುರದಲ್ಲಿ 4 ಹೀಗೆ ಉತ್ತರದಲ್ಲಿ 244 ಎಂದು ಕೊಟ್ಟಿದ್ದೀರಿ. ಇದೊಂದು ತಪ್ಪು ಮಾಹಿತಿ. ಅದನ್ನು ಸರಿ ಮಡಿಕೊಂಡು ಹೇಳಬೇಕು. ಎರಡನೆಯದು ಏನೆಂದರೆ. ಯಾದ್ಗೀರ್ ತಾಲ್ಲೂಕಿನಲ್ಲಿ ಸುಮಾರು ನಾಲ್ಕು ಕೆರೆಗಳನ್ನು ಈ ವರ್ಷ ತಾವು ದುರಸ್ತಿಗಾಗಿ ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ. ಆದರೆ ಹಣ ಖರ್ಚು ಮಾಡಿದ್ದು ಎಷ್ಟೆಂದರೆ ಕೇವಲ ಆರು ಲಕ್ಷ ರೂಪಾಯಿಗಳು. ಇಲ್ಲಿಯವರೆಗೆ ಖರ್ಚಾದಂಥ ಎಕ್ಸ್‌ಪೆಂಡೀಚರ್ ಎಷ್ಟಂದರೆ 6.52 ಲಕ್ಷ ರೂಪಾಯಿಗಳು. ಇದು ಏನು ತೋರಿಸುತ್ತದೆಂದರೆ, ನೀವು ಯಾವ ಕೆಲಸಗಳನ್ನು ಈ ವರ್ಷದಲ್ಲಿ ಪೂರ್ಣಗೊಳಿಸುವುದಕ್ಕೆ ಗುರಿಯನ್ನು ಇಟ್ಟುಕೊಂಡಿಲ್ಲ ಎನ್ನುವುದನ್ನು ತೋರಿಸುತ್ತದೆ. ಮೂರನೆಯದಾಗಿ ಏನೆಂದರೆ, ತಾವು ಎಲ್.ಓ.ಸಿ. ಕೊಡುವಾಗ ಸಾಮಾನ್ಯವಾಗಿ ಅಲ್ಲಲ್ಲಿ ಕೆಲಸಗಳು ಯಾವ ರೀತಿಯಾಗಿ ಆಗುತ್ತಿದ್ದಾವೆ ಅದನ್ನು ನೋಡಿಕೊಂಡು ಎಲ್.ಓ.ಸಿ. ಕೊಡುವುದಿಲ್ಲ. ನಿಮ್ಮ ಚೀಫ್ ಇಂಜಿನಿಯರ್‌ರವರೆ, ಕುಶಿಬಂದಂತೆ ಅಥವಾ ಬಿಜಾಪುರದಲ್ಲಿರತಕ್ಕಂತಹ ಚೀಫ್ ಇಂಜಿನಿಯರ್ ಅಥವಾ ನಿಮ್ಮ ಸೂಚನೆಯ ಮೇಲೆ ಅಥವಾ ಅವನೇ ನೇರವಾಗಿ ಎಲ್.ಓ.ಸಿ.ಯನ್ನು ಕೊಡುತ್ತಾನೆ ಏನೋ ನನಗೆ ಗೊತ್ತಿಲ್ಲ, ಅನೇಕ ಕೆಲಸಗಳನ್ನು ಮಾಡಿ. ಇವತ್ತು ಆ ಹಣಕ್ಕೋಸ್ಕರ ಕಂಟ್ರಾಕ್ಟ್‌ದಾರರು ಅಡ್ಡಾಡುತ್ತಿದ್ದಾರೆ ಮತ್ತು ಅವರು ಬೆಂಗಳೂರಿಗೆ ಬಂದು ಎನ್‌ಕ್ವೈರಿ ಮಾಡಿಕೊಂಡು ತಮ್ಮ ಎಲ್.ಓ.ಸಿ.ಯನ್ನು ತೆಗೆದುಕೊಂಡು ಹೋಗಬೇಕು.

10.40 ಎ.ಎಂ.

ಹೀಗಾದರೆ ನೀವು ಲೆಕ್ಕ ಹಾಕಿ, ಯಾವ ರೀತಿ ಕೆಲಸ ಪೂರ್ತಿಯಾಗುತ್ತವೆ ಮತ್ತು ಯಾವ ರೀತಿಯಾಗಿ ಆ ಕೆಲಸಗಳು ನಡೆಯುತ್ತವೆ ಎನ್ನುವುದು ತಾವು ಹೇಳಬೇಕು. ಇದನ್ನು ನಾನು ಅವರ ಗಮನಕ್ಕೂ ಕೂಡ ತಂದಿದ್ದೇನೆ. ಇದನ್ನು ಇಶ್ಯೂ ಮಾಡಬಾರದೆಂದೇನಿಲ್ಲ, ಎಲ್.ಓ.ಸಿ. ಗೋಸ್ಕರವೇ ಒಬ್ಬ ಕಂಟ್ರಾಕ್ಟರ್ ಹಾಗೂ ಸಂಬಂಧಪಟ್ಟ ಶಾಸಕರು ಓಡಾಡಬೇಕೆಂದರೆ ಇದು ಯಾವ ನ್ಯಾಯ? ಎಲ್ಲೆಲ್ಲಿ ಎಷ್ಟು ಕೆಲಸ ಆಗುತ್ತದೆ, ಅದನ್ನು ತಕ್ಷಣ ಕೊಡಿಸತಕ್ಕಂಥ ವ್ಯವಸ್ಥೆ ಮಾಡಬೇಕು. ಮತ್ತು ಎಲ್.ಓ.ಸಿ.ಗೂ ಪ್ರಭಾವ ಬೀರತಕ್ಕಂಥದ್ದು ಬರಬಾರದು. ಇದರ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕು.

ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ : ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಗೌರವಾನ್ವಿತ ಹಿರಿಯ ಸದಸ್ಯರು ಗುಲ್ಬರ್ಗಾ ಡಿವಿಜನ್ನಿನ ಬಗ್ಗೆ ಕೆಲವು ಮಾಹಿತಿಗಳನ್ನು ಕೇಳಿದ್ದಾರೆ. ಅವರ ಪ್ರಶ್ನೆ ಈ ವರ್ಷ ಆ ಕೆಲಸಕ್ಕೆ ಕಡಿಮೆ ಹಣ ಕೊಟ್ಟಿದ್ದೀರಿ ಎಂದು. ಕೆರೆ ರಿಪೇರಿ ಅಥವಾ ದುರಸ್ತಿ ಮಾಡತಕ್ಕಂಥ ಹಣ, ನಾನ್ ಪ್ಲಾನ್‌ನಲ್ಲಿ ರಿಪೇರಿ ಕೆಲಸ ಶುರುವಾದಾಗ ಅದನ್ನು ಸಂಪೂರ್ಣವಾಗಿ ರಿಪೇರಿ ಮಾಡತಕ್ಕಂಥ ಜವಾಬ್ದಾರಿಯನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ಹಾಗೂ ಕೆಲವು ಕೆರೆಗಳು ಜಿಲ್ಲಾ ಪಂಚಾಯಿತಿಗೆ ಬದಲಾವಣೆಯಾಗಿವೆ ಇನ್ನೊಂದು ವಿಚಾರ ಸನ್ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಬಯಸುತ್ತಿದ್ದೇನೆ. ನಮ್ಮ ಹಳ್ಳಿಗಳಲ್ಲಿ ಇರತಕ್ಕಂಥ ಅನೇಕ ಕೆರೆಗಳು ಗದ್ದೆಗಳಾಗಿ ಹಾಗೂ ಪಟ್ಟಣದಲ್ಲಿರತಕ್ಕಂಥ ಕೆರೆಗಳು ಸೈಟಾಗಿವೆ. ಇದು ತಮಗೂ ಕೂಡ ಗೊತ್ತಿದೆ. ಇವುಗಳ ಫಿಗರ್ ಸರಿಯಾಗಿ ಬರಬೇಕೆಂದು ಪ್ರತಿ ಜಿಲ್ಲೆ ಹಾಗೂ ಪ್ರತಿ ತಾಲ್ಲೂಕಿನಲ್ಲಿ ಡಿಪಾರ್ಟ್‌ಮೆಂಟ್‌ನಿಂದ ಸರ್ವೆ ಮಾಡಬೇಕೆಂದು ಸೂಚನೆ ಕೊಟ್ಟಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನ್ನ ಪ್ರಶ್ನೆಯೇ ಬೇರೆ ಇದೆ. ನಾನು ನೇರವಾಗಿ ಕೇಳುತ್ತಿದ್ದೇನೆ. ಯಾದಗೀರ್ ತಾಲ್ಲೂಕಿನಲ್ಲಿ 244 ಮೈನರ್ ಇರಿಗೇಶನ್ ಟ್ಯಾಂಕ್ ಇವೆ ಎಂದು ಏನು ಹೇಳುತ್ತಿದ್ದೀರಿ ಇದು ಸತ್ಯಕ್ಕೆ ದೂರವಾದ ಮಾತು. ಜಿಲ್ಲಾಪರಿಷತ್ ಟ್ಯಾಂಕ್‌ಗಳು ಇವೆ ಎಂದು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ. ನಿಮ್ಮ ವ್ಯಾಪ್ತಿಗೆ ಬರತಕ್ಕಂಥ ಟ್ಯಾಂಕ್ಸ್ 244 ಇರುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ತಾವು ಕರೆಕ್ಟ್ ಫಿಗರನ್ನು ಹೇಳಿ ಬಿಡಿ. ಉಳಿದಂಥ ಟ್ಯಾಂಕಿಗೆ ಎಷ್ಟು ಹಣ ಕೊಟ್ಟಿದ್ದೀರಿ? ಎಲ್.ಓ.ಸಿ. ಕೊಡುವುದರಲ್ಲಿ ಏನು ತೊಂದರೆ ಅದನ್ನು ಹೇಳಿ ಬೆಂಗಳೂರಿನಲ್ಲಿ ಸೈಟಾಗಿದ್ದು ಎಲ್ಲರಿಗೂ ಗೊತ್ತಿದ್ದ ವಿಷಯ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಟ್ಯಾಂಕುಗಳ ಬಗ್ಗೆ ಜಿಲ್ಲಾಪರಿಷತ್ತಿನಿಂದ ಮಾಹಿತಿಯನ್ನು ತರಿಸಿ ಆ ಮೇಲೆ ವಿವರವನ್ನು ಒದಗಿಸುತ್ತೇನೆ. ಎಲ್.ಓ.ಸಿ. ಯ ಬಗ್ಗೆ ಗೌರವಾನ್ವಿತ ಹಿರಿಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ ನಾನು ಪಟ್ಟಿ ಅವರ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತಿದ್ದೇನೆ. ಜನವರಿಯಿಂದ ಸೆಪ್ಟಂಬರ್‌ವರೆಗೆ ಎಲ್ಲದ್ದಕ್ಕಿಂತ ಹೆಚ್ಚು ಸುಮಾರು 450 ಕೋಟಿ ರೂಪಾಯಿಯ ಎಲ್.ಓ.ಸಿ. ಯನ್ನು ಬಿಡುಗಡೆ ಮಾಡಿದ್ದೇವೆ. ಅದು ಪಟ್ಟಿಯಲ್ಲಿದೆ. ಅದನ್ನು ಸನ್ಮಾನ್ಯ ಸದಸ್ಯರ ಅವಗಾಹನೆಗೆ ಕಳುಹಿಸಲು ತಮ್ಮ ಅಪ್ಪಣೆ ಪಡೆಯುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಪದೇ ಪದೇ ಪ್ರಶ್ನೆ ಕೇಳುವುದಕ್ಕೆ ಇಷ್ಟಪಡುವುದಿಲ್ಲ ಅಧ್ಯಕ್ಷರೇ, ನಾನು ಸ್ಪಷ್ಟವಾಗಿ ಕೇಳುತ್ತಿದ್ದೇನೆ? ಯಾದಗೀರ್ ತಾಲ್ಲೂಕಿನಲ್ಲಿ ಮೈನರ್ ಇರಿಗೇಶನ್ ಟ್ಯಾಂಕ್ಸ್ ಎಷ್ಟು? How many minor irrigation tanks are there in Yadgir taluka? Have you released the amount as per LOC? ಅದಕ್ಕೆ ನೀವು ಎಷ್ಟು ಎಲ್.ಓ.ಸಿ. ಇಶ್ಯೂ ಮಾಡಿದ್ದೀರಿ? ಗುಲ್ಬರ್ಗಾದ್ದು ಹೇಳಿದಿರಿ.

ಗುಲ್ಬರ್ಗಾದಲ್ಲೂ ಕೂಡ ಯಾರು ಪ್ರಭಾವ ಬೀರುತ್ತಾರೆ ಅಂಥವರಿಗೆ ನೀವು ಕಳುಹಿಸಿಕೊಡುತ್ತೀರಿ ಕೆಲಸದ ಮೇಲೆ ನೀವು ಅವರಿಗೆ ಕೊಟ್ಟಿದ್ದೀರೇನು

ಅಧ್ಯಕ್ಷರು : ಟೋಟಲ್ ಟ್ಯಾಂಕ್ಸ್ ಜಿಲ್ಲಾಪರಿಷತ್‌ದ್ದಿಷ್ಟು? ಮೈನರ್ ಇರಿಗೇಶನ್‌ದಿಷ್ಟು ಎಂದು ಆ ಮೇಲೆ ವಿವರ ತರಿಸಿಕೊಡುತ್ತೇನೆಂದು ಅವರು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ ಅಧ್ಯಕ್ಷರೇ, ಜಿಲ್ಲಾಪರಿಷತ್‌ದ್ದು ಇವರಿಗೆ ಬರುವುದಿಲ್ಲವಲ್ಲ, ಇವರ ಡಿಪಾರ್ಟ್‌ಮೆಂಟ್‌ದು ಎಷ್ಟು?

ಅಧ್ಯಕ್ಷರು : ಟೋಟಲ್ ಟ್ಯಾಂಕ್ಸ್ ಲಿಸ್ಟ್ ಬಂದು ಬಿಟ್ಟಿದೆ ಕ್ಲಾಸಿಫೈ ಮಾಡಿಬಿಟ್ಟು ಹೇಳುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮ್ಮ ಉದ್ದೇಶ ಏನೆಂದರೆ ಅಧ್ಯಕ್ಷರೇ, ಅವರು ಪತ್ರ ಬರೆದರೂ ಹೇಳುವುದಿಲ್ಲ, ಸದನದಲ್ಲಿಯಾದರೂ ಕೇಳಿದರೆ ಪರಿಹಾರ ಸಿಗುತ್ತದೇನೋ ಎಂದು ಆಸೆ. ನಾನು ಮೈನರ್ ಇರಿಗೇಶನ್ ಟ್ಯಾಂಕ್ಸ್ ಬಗ್ಗೆ ತಾಲ್ಲೂಕು ವೈಸ್ ಸ್ಪಷ್ಟವಾಗಿ ಕೇಳುವ ಉದ್ದೇಶವೇನು ಅಧ್ಯಕ್ಷರೇ, ಅದೇ ಆಯಿತು. ಇಲ್ಲವಾದರೆ ನಾವು ಪತ್ರ ಬರೆದಾಗಲಾದರು ಸ್ಪಂದಿಸಬೇಕು. ಅದೂ ಇಲ್ಲ, ಇದೂ ಇಲ್ಲವೆಂದರೆ ಹೇಗೆ?

ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ : ಯಾದಗೀರ್ ತಾಲ್ಲೂಕಿನಲ್ಲಿ ಮೈನರ್ ಇರ್ರಿಗೇಶನ್ ಟ್ಯಾಂಕುಗಳು ಎಷ್ಟು ಎಂಬ ಮಾಹಿತಿ ಇಲ್ಲ, ತರಿಸಿಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಯಿತು.

ಅಧ್ಯಕ್ಷರು : ಈಗ ಇಲ್ಲ, ತರಿಸಿಕೊಡುತ್ತಾರೆ. ತಾವು ಸಹಕಾರ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ತಾಲ್ಲೂಕುವೈಸ್ ಫಿಗರ್ಸ್ ಕೇಳಿದಾಗ ಸಾಧಾರಣವಾಗಿ ಅವರು ಕೊಡಬೇಕಾಗುತ್ತದೆ. ಈಗ ಇಲ್ಲ, ಆಯಿತು. ನಾನುಅವರಿಗೆ ಎಂಬರ್ಯಾಸ್ ಮಾಡುವುದಿಲ್ಲ, ಆ ಮೇಲೆ ತರಿಸಿಕೊಡಿ. ಕನಿಷ್ಟ ಪಕ್ಷ ಈ ವಿಶ್ವಬ್ಯಾಂಕ್ ಏಡ್ ನಲ್ಲಿ ಗುಲ್ಬರ್ಗಾದಲ್ಲಿ ಯಾವುದು ಯಾವುದು ಇವೆ ಅಷ್ಟಾದರೂ ಹೇಳಿ. ಅದಕ್ಕೆ ಏನಾದರೂ ಹಣ ಬಂದಿದೆಯೇ ನಿಮ್ಮ ನಬಾರ್ಡ್‌ನಿಂದಾಗಲಿ ವಿಶ್ವಬ್ಯಾಂಕಿನಿಂದಾಗಲಿ, ಅದಕ್ಕೇನಾದರೂ ತಾವು ಕಾರ್ಯಕ್ರಮ ಹಾಕಿಕೊಂಡಿದ್ದಿರೋ?

ಅಧ್ಯಕ್ಷರು : ವಿಶ್ವಬ್ಯಾಂಕಿನ ಮಾಹಿತಿಯನ್ನು ಅವರು ಇಲ್ಲಿ ಏತಕ್ಕೆ ತಂದಿರುತ್ತಾರೆ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾಹಿತಿಯನ್ನು ತರಿಸಿ ನಂತರ ಒದಗಿಸುತ್ತೇನೆ.

ಅಧ್ಯಕ್ಷರು : ಆಯನೂರು ಮಂಜುನಾಥ್, ತಮ್ಮ ಪ್ರಶ್ನೆಗೆ ನಾನು ಅವಾಗಲೇ ಹೇಳಿದೆ ಸನ್ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಗೈರು ಹಾಜರಿಯಾಗುವುದಕ್ಕೆ ಅನುಮತಿ ಪಡೆದು ಕೊಂಡಿದ್ದಾರೆ. ಅವರು ಬಂದ ದಿವಸ ಅಡ್ಜೆಸ್ಟ್ ಮಾಡುತ್ತೇನೆ. ತಾವು ದಯಮಾಡಿ ಸಹಕರಿಸಬೇಕು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, 12 ನೇ ಸೆಪ್ಟೆಂಬರ್ 1995ರ 20ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 50 ಪ್ರಶ್ನೆಗಳ ಪೈಕಿ 38 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇವೆ.